ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಪ್ರಾಜೆಕ್ಟ್ ಕ್ಲಿಯರಾಗಿತ್ತು. ಕೇಂದ್ರ ಸರಕಾರದ ಪರಿಸರ ಇಲಾಖೆ ಇದನ್ನು ವಾಪಸ್ ತೆಗೆದುಕೊಂಡಿದ್ದು ಏಕೆ? ಯಾವುದೇ ಯೋಜನೆಯಾಗಲೀ ಸಿವಿಲ್ ಕಾಮಗಾರಿಗಾಗಿ ಮೆಟೀರಿಯಲ್ ಪರ್ಚೇಸ್ ಮಾಡುವ ಬಗ್ಗೆ ಸರಕಾರ ನಿಯಮವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಮೆಷಿನರಿ ತೆಗೆದುಕೊಂಡು 3-4 ವರ್ಷಗಳಾಗಿದೆ. ಆ ಮೆಷಿನರಿಯೆಲ್ಲಾ ನೂರಾರು ಕೋಟಿ ರೂಪಾಯಿಗಳಾಗುತ್ತದೆ. ಅಷ್ಟು ಬೆಲೆಯ ಮೆಷಿನರಿಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿದ್ದಾರೆ. ಎಷ್ಟು ವರ್ಷಕ್ಕೆ ಎರೆಕ್ಟ್ ಮಾಡುತ್ತೀರಿ. ಅಲ್ಲಿಯವರೆಗೆ ನಿಮ್ಮ ವ್ಯಾರಂಟಿ, ಗ್ಯಾರಂಟಿಯಾಗಲೀ ಅಥವಾ ಟರ್ನರಿ ಅಗ್ರಿಮೆಂಟ್ ಮಾಡಿ ಕೊಳ್ಳುವುದಾದರೆ ಆ ಗ್ಯಾರಂಟಿ ಪೀರಿಯಡ್ ಉಳಿಯುತ್ತದೆಯೇ?

ಆವತ್ತು ಬರುವ ಲೋಪದೋಷಕ್ಕೆ ಯಾರನ್ನು ಜವಾಬ್ದಾರಿ ಮಾಡುತ್ತೀರಿ. ಇದನ್ನೇನಾದರೂ ಎರೆಕ್ಟ್ ಮಾಡುತ್ತೀರಾ? ಎನ್.ಜಿ.ಇ.ಎಫ್.ಆಗಲೀ, ಬಿ.ಹೆಚ್.ಇ.ಎಲ್.ನದಾಗಲೀ ಗ್ಯಾರಂಟಿ ಪೀರಿಯಡ್ ಉಳಿಯುವುದಿಲ್ಲ. ಆ ಸಮಯಕ್ಕೆ ಅವರು ಸರಬರಾಜು ಮಾಡಿ 2-3 ವರ್ಷವಾಗಿರುತ್ತದೆ. ಇದೆಲ್ಲಾ ಪರ್ಚೇಸ್ ಮಾಡಿದ್ದುದು ಏಕೆ? ಏನು ಆತುರ ಇತ್ತು? 1986ರಲ್ಲಿ ಕ್ಲಿಯರ್ ಆಗಿದ್ದ ಪ್ರಾಜೆಕ್ಟ್ ಅದು. ಅದು ಮತ್ತೆ ಹಿಂದಕ್ಕೆ ತೆಗೆದುಕೊಳ್ಳಬೇಕಾದರೆ 1986ರಲ್ಲಿ ಇವರು ಒಂದು ಬರವಣಿಗೆಯಲ್ಲಿ ಕೊಟ್ಟಿದ್ದಾರೆಂದು ಯಾರೋ ಮಾಹಿತಿ ನೀಡಿದ್ದಾರೆ. 700 ಹೆಕ್ಟೇರ್ ಫಾರೆಸ್ಟ್ ಅನ್ನು ಬೇರೆ ಕಡೆ ರೈಸ್ ಮಾಡಿ ಬಿಟ್ಟಿದ್ದಾರೆಂದು ಸುಳ್ಳು ಹೇಳಿದರು ಯಾರು ಎಂಬುದನ್ನು ಸದನಕ್ಕೆ ತಿಳಿಸುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ : ಪರಿಸರ ಕೂಟ ಮತ್ತು ಬೆಂಗಳೂರಿನ ಸಮಗ್ರ ವಿಕಾಸ ಪರಿಷತ್ ಇವರು ಈ ವಿವಾದವನ್ನುಂಟುಮಾಡಿದ್ದಾರೆ. ಮತ್ತು ಇವರೇ ಉಚ್ಚ ನ್ಯಾಯಾಲಯದಲ್ಲಿ ಇದಕ್ಕೆ....

ಶ್ರೀ ಜೆ.ಸಿ. ಮಾಧುಸ್ವಾಮಿ : ಎನ್‌ವೈರನ್‌ಮೆಂಟಲ್ ಕ್ಲಿಯರೆನ್ಸ್ ಅನ್ನು ಅವರೇ ವಾಪಸ್ ತೆಗೆದುಕೊಂಡಿದ್ದಾರೆ. That is one part.

ಶ್ರೀ ಎಸ್.ಎಂ. ಕೃಷ್ಣ : ಕೋರ್ಟ್ ಆದೇಶಗಳನ್ನು ಉಲ್ಲಂಘನೆ ಮಾಡಬೇಕೆಂದು ತಮ್ಮ ಸಲಹೆಯೇನು? ನೀವು ಆ ಸಲಹೆ ಮಾಡಿದರೂ ಕೂಡ ನಾನು ಒಪ್ಪತಕ್ಕಂತಹವನು ಅಲ್ಲ. ಏಕೆಂದರೆ ಕೋರ್ಟ್ ಆದೇಶವನ್ನು ಪರಿಪಾಲಿಸಬೇಕಾಗುತ್ತದೆ. ನೂರು ಕೋಟಿ ರೂಪಾಯಿಗಳ ಮೆಷಿನರಿ ಏನು ಕೊಂಡು ಕೊಂಡಿದ್ದಾರೆ ಅದು ಪ್ಲಾನ್‌ನಲ್ಲಿ ಸೇರಿತ್ತು. ಕೇಂದ್ರ ಸರಕಾರ ಒಂದು ಘಟ್ಟದಲ್ಲಿ ಇದಕ್ಕೆ ಅನುಮತಿಯನ್ನು ಕೊಟ್ಟಿತ್ತು ಮತ್ತು ಬಡ್ಜೆಟ್ಟಿನಲ್ಲಿ ಇದಕ್ಕೆ ಹಣವನ್ನು ಒದಗಿಸಲಾಗಿತ್ತು. ಇದು ಮಲ್ಟಿ ಪರ್‌ಪಸ್ ಪ್ರಾಜೆಕ್ಟ್ ಆದುದರಿಂದ ಮಾಡಬೇಕೆಂಬ ಆತುರ ಈ ಸಂದರ್ಭದಲ್ಲಿತ್ತು. ಅದಾದ ನಂತರ ನಡೆದಿರತಕ್ಕಂತಹ ಬೆಳವಣಿಗೆಗಳಿಂದಾಗಿ ಈ ಕಾರ್ಯ ಸ್ಥಗಿತಗೊಂಡಿದೆ. ತಾವು 'ವಾರಂಟಿ ಪೀರಿಯಡ್ ಬಗ್ಗೆ ಏನು ಹೇಳಿದ್ದೀರಿ ಅದು ನಿಜ. ಯಾವಾಗಿನಿಂದ ವಾರೆಂಟ್. Contractual obligations ಏನೇನು ಇರುತ್ತದೆ. between the Irrigation Department or the power Corporation of the Government of Karnataka and the Bharat Heavy Electricals Limited. I have to look into the terms of the contract on which these machineries were purchased.

ಪಟ್ಟಣ ಕುಡಿಯಲ್ಲಿ ಸಣ್ಣ ನೀರಾವರಿ ಕೆರೆ

503 - ಶ್ರೀ ಸುಭಾಷ್ ಎಸ್. ಜೋಶಿ (ನಿಪ್ಪಾಣಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ಮತಕ್ಷೇತ್ರದ ಪಟ್ಟಣಕುಡಿ ಸಣ್ಣ ನೀರಾವರಿ ಕೆರೆ ಮಂಜೂರಾಗಿದೆಯೇ?

ಅ) ಹಾಗಿದ್ದರೆ ಒಟ್ಟು ಒದಗಿಸಿದ ಬಜೆಟ್ ಅನುದಾನ ಎಷ್ಟು?
ಇ) 1993-94ನೇ ಸಾಲಿನ ಮಂಜೂರಾದ ಹಣವೆಷ್ಟು?
ಈ) ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇಲ್ಲ

ಆ) 1993-94ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಯು ಸೇರಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಆಯವ್ಯಯದಲ್ಲಿ ಸೇರಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

12.00 ಪಿ.ಎಂ.

Sri. Subhashs Joshi : Sir, I am sorry to tell that I never expected this type of answer from the Minister. This MI. tank at Pattankudi in Nippani constituency is already budgeted in Zilla Parishad, Belgaum. The proposal for the Technical Sanction is with the Chief Engineer, Bijapur. The estimates have already been drawn. The survey has been done. It has been inauguated and now the Minister says that this MI Tank at Pattankudi is not at all sanctioned and therefore, the question of allocating the Budget does not arise. This is far from factual truth and incorrect.

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ನಿಜ. ಇದು ಜಿಲ್ಲಾ ಪರಿಷತ್ತಿನ ಕಾಮಗಾರಿ. ಈಗಾಗಲೇ ಜಿಲ್ಲಾ ಪರಿಷತ್ತಿನ ವತಿಯಿಂದ 44 ಸಾವಿರ ರೂಪಾಯಿ ಆಯವ್ಯಯದಲ್ಲಿ ಸೇರ್ಪಡೆಯಾಗಿದೆ. ಇದು ಕೇವಲ ನಾಲಾ ಬಂಡಿಂಗ್ ಸಲುವಾಗಿ ಸೇರ್ಪಡೆಯಾಗಿದೆ. ಆದ್ದರಿಂದ ಜಿಲ್ಲಾ ಪರಿಷತ್ತಿನವರಿಗೆ ಆ ಕಾರ್ಯವನ್ನು ಶೀಘ್ರವಾಗಿ ಮಾಡಲು ನಾವು ಆದೇಶ ನೀಡುತ್ತೇವೆ. ಇದು ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ.

Sri. Subhash Joshis : It is not for ala bunding. Nala bunding has already been done. The budget allocation was exclusiuely for taking up MI Tauk. The Zilla Parishad, Belgaum has allocated the Budget amount and then it has been taken over by the minor Irrigation Department. sir, during the last budget session myself and Sri S.H. Koujalgi had put the calling attention and the reply to which the Hon. Minister has assured that within a short time he would start the work. It was the categorical assurance given by the Minister on the floor of the House and now he says that it is not budgeted. Therefore, it is my allegation that the Minor irrigation authorities at Belgaum are always giving wrong information and they are manipulating the things and because of which the number of works in Belgaum District have come to a standstill.

ಡಾ॥ ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ನನಗೆ ಬಂದಂಥ ವರದಿ ಪ್ರಕಾರ ಇದು ನಾಲಾ ಬಂಡಿಂಗ್ ಕೆಲಸದ ಸಲುವಾಗಿ. ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಕೂಡಿಸಲಾಗಿದೆ.

ಶ್ರೀ ವೈ.ಕೆ. ರಾಮಯ್ಯ : ಒಂದು ರೂಪಾಯಿ ಕೊಟ್ಟಿಲ್ಲ. ಇಡೀ ರಾಜ್ಯದಲ್ಲಿ ಸಣ್ಣ ನೀರಾವರಿಗೆ ಒಂದು ರೂಪಾಯಿ ಕೊಟ್ಟಿಲ್ಲ. ಅದಕ್ಕೆ ಇವರು ಸರಿಯಾಗಿ ಉತ್ತರ ಕೊಡುವುದಿಲ್ಲ. ಯಾವ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ದುಡ್ಡು ಕೊಟ್ಟಿದ್ದಾರೆ ಹೇಳಿ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಬಾಯಿಗೆ ಬಂದಂತೆ ಸುಳ್ಳು ಹೇಳಿ ಹೋಗುವುದೇ? ಒಂದೇ ಒಂದು ರೂಪಾಯಿ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ರೂಪಾಯಿ ಕೂಡ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಅವರು ಉತ್ತರ ಹೇಳಿದ್ದಾರಲ್ಲಾ, ಅವರು ಏನು ಕೇಳುತ್ತಾರೋ ಕೇಳಿ.

(ಗೊಂದಲ)

ಅಧ್ಯಕ್ಷರು: ಈಗ ಅವರು ಉತ್ತರ ಹೇಳಿದ್ದಾರಲ್ಲಾ, ಅವರು ಏನು ಕೇಳುತ್ತಾರೋ ಕೇಳಿ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಬೆಳಗಾಂ ಜಿಲ್ಲೆಯಲ್ಲಿ ಈ ಮೈನರ್ ಇರಿಗೇಷನ್ ಕೆಲಸ ನಡೆದಿಲ್ಲ ಎಂದು 31-3-93ಕ್ಕೆ ಇದೇ ಹೌಸ್‌ನೊಳಗೆ ನಾನು ಮತ್ತು ಮಾನ್ಯ ಸುಭಾಷ್‌ಜೋಶಿಯವರು ಪ್ರಶ್ನೆಯನ್ನು ಕೇಳಿದ್ದೆವು. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಮೈನರ್ ಇರಿಗೇಷನ್ನಿನ ಯಾವುದೇ ಕೆಲಸ ನಡೆದಿಲ್ಲ ಎಂದಾಗ, ಆ ಕಾಲಕ್ಕೆ ನೀವು ಎಲ್ಲಾ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ.

ಇವತ್ತಿನತನಕ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನಿಂದ ಬೆಳಗಾಂ ಜಿಲ್ಲೆಯಲ್ಲಿ ಯಾವುದಾದರೂ ಒಂದು ಕೆಲಸ ಪ್ರಾರಂಭ ಮಾಡಿದ್ದೀರಾ? ಇದು ಒಂದನೆಯದು. ಎರಡನೆಯದು ಅಂದಾಜು ವೆಚ್ಚ ತಯಾರಿಸಿದ್ದೀರಾ ಹೇಗೆ? ಮೂರನೆಯದು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದೀರೋ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಸಹಿತ ಇದರ ಬಗ್ಗೆ ನಾವು ಮಾತನಾಡಿದ್ದೇವೆ. ಅದರ ಸಲುವಾಗಿ ಬೆಳಗಾಂಜಿಲ್ಲೆಯಲ್ಲಿ ಯಾವ ಕೆಲಸವನ್ನು ಪ್ರಾರಂಭ ಮಾಡಿದ್ದೀರಿ ಎಂದು ಹೇಳಬೇಕು. ಇವತ್ತಿನ ತನಕ ಅಲ್ಲಿ ಒಂದು ಪೈಸೆ ಸಹಿತ ವೆಚ್ಚ ಮಾಡಿಲ್ಲ.

Sri Subhash S. Joshi : The Hon. Minister has given a categorial assurance on the floor of the House that he would start the works within 3 months.

ಪ್ರೊ: ಎಂ. ಡಿ. ನಂಜುಂಡಸ್ವಾಮಿ : ನಮ್ಮ ಹಿಂದೆ ಕೆರೆಗಳನ್ನು ನಾವೇ ಸರಿ ಮಾಡಿಕೊಳ್ಳುತ್ತಿದ್ದೆವು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ತಾವು ಬೇರೆ ರೂಪದಲ್ಲಿ ತಮ್ಮ ಪ್ರಶ್ನೆಯನ್ನು ಕೇಳಿ. ಇದು ಬೆಳಗಾಂ ಜಿಲ್ಲೆ ಬಗ್ಗೆ ಅವರು ಉತ್ತರ ಹೇಳುತ್ತಿದ್ದಾರೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ಕೆಲಸವನ್ನು ತೆಗೆದುಕೊಂಡ ಮೇಲೆ ಕೆಲಸಗಳು ನಿಂತು ಹೋಗಿದೆ. ಹಿಂದಿನ

ಪದ್ಧತಿಯಂತೆ ಏಕೆ ಬರಬಾರದು? ನೀವಂತೂ ಮಾಡುವುದಿಲ್ಲ. ನಿಮಗೆ ಕೆಳೆ ಬಗ್ಗೆ ಗಮನ ಇಲ್ಲ. ಈಚಲು ಮರದ ಬಗ್ಗೆ ಗಮನ ಇದೆ. ಮತ್ತೆ ವಾಪಸ್ ನಮಗೆ ಕೆರೆ ಕೊಡಿ ನಾವು ಸರಿ ಮಾಡಿಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ನಂಜುಂಡ ಸ್ವಾಮಿಯವರೆ, ಈಚಲು ಮರ ಎಲ್ಲಿದೆ, ಈಚಲು ಮರ ಇಲ್ಲ.

ಡಾ॥ ಆರ್. ಬಿ. ಚೌಧರಿ : ನಾನು ಖುದ್ದಾಗಿ ಹೋಗಿ ಪರಿಶೀಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಹೇಳಿದ್ದಾರೆ. ಕೌಜಲಗಿಯವರೆ, ಕುಳಿತುಕೊಳ್ಳಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನೆಕ್ಸ್ಟ್ ಕ್ವೊಶ್ಚನ್.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ಏನು ಆಗುತ್ತದೆ? ಕೌಜಲಗಿಯವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸದಸ್ಯರಾದಂತಹ ಸುಭಾಷ್‌ಜೋಷಿ ಅವರದು ಬಹಳ ಸಿಂಪಲ್ ಪ್ರಶ್ನೆ ಇದೆ. ಮಾನ್ಯ ಸಚಿವರು ಈ ಕೆಲಸ ಮೂರು ತಿಂಗಳೊಳಗೆ ಶುರು ಮಾಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೆ? ಪರಿಶೀಲನೆ ಅಲ್ಲ ಕೆಲಸ ಶುರು ಆಗಿದ್ದರೆ ಶುರು ಆಗಿದೆ ಎಂದು ಹೇಳಲಿ. ಶುರು ಮಾಡುವುದಕ್ಕೆ ಆಗಲಿಲ್ಲ ಎಂದರೆ ಇಂತಹ ತೊಂದರೆಯಿಂದ ಶುರು ಮಾಡುವುದಕ್ಕೆ ಆಗಿಲ್ಲ ಎಂದು ಹೇಳಲಿ. ಇಷ್ಟು ದಿವಸದೊಳಗೆ ಮಾಡುತ್ತೇವೆ ಎಂದು ಹೇಳಲಿ. ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಹೇಗೆ? ಇಂತಹ ಅಶ್ಯೂರೆನ್ಸ್ ಕೊಟ್ಟಿಲ್ಲ ಎಂದಾದರೂ ಹೇಳಲಿ.

ಡಾ॥ ಆರ್. ಬಿ. ಚೌಧರಿ : ಅಲ್ಲಿಯ ಪರಿಸ್ಥಿತಿ ಏನು ಇದೆ ಎಂದು ಖುದ್ದಾಗಿ ಹೋಗಿ ನೋಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದೇನೆ. ಹಣ ಕೊಟ್ಟಿರುವುದು ನಾಲಾ ಬಂಡಿಂಗ್ ಎಂದು ಇನ್‌ಫರ್ಮೇಶನ್ ಬಂದಿದೆ. ಅದರ ಸಲುವಾಗಿ ನಾನು ಖುದ್ದಾಗಿ ಹೋಗಿ ಪರಿಶೀಲನೆ ಮಾಡಿ ತೀವ್ರವಾಗಿ ವರ್ಕ್ ಸ್ಟಾರ್ಟ್ ಆಗುವ ಹಾಗೆ ಮಾಡುತ್ತೇನೆ.

ಸಕಲೇಶಪುರ ಜೆ.ಎಂ.ಎಫ್.ಸಿ.ಗೆ. ಸ್ವಂತ ಕಟ್ಟಡ ನಿರ್ಮಾಣ

170 - ಶ್ರೀ ಬಿ. ಆರ್. ಗುರುದೇವ್, (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಜೆ.ಎಂ.ಎಫ್.ಸಿ.ಗೆ. ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಸ್ವಂತ ಕಟ್ಟಡ ನಿರ್ಮಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಸಕಲೇಶಪುರದಲ್ಲಿ ಆರ್.ಎಂ.ಸಿ.ಯ ಖಾಲಿ ಜಾಗವಿದ್ದು ಅದನ್ನು ಜೆ.ಎಂ.ಸಿ.ಗೆ ಸ್ವಾಧೀನಪಡಿಸಿಕೊಂಡು ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :